# 2. ಶಿವಯೋಗ ಮಂದಿರ

– ಡಿ.ಎಸ್. ಕರ್ಕಿ

(ಕವಿ ಪರಿಚಯ: ಡಿ.ಎಸ್. ಕರ್ಕಿ ಇವರ ಪ್ರಮುಖವಾದ ಕಾವ್ಯಧೋರಣೆ ಕನ್ನಡ ನಾಡಿನ ನೈಸರ್ಗಿಕ ಸೌಂದರ್ಯ, ಲಲಿತ ಕಲೆಗಳ ಮೇಲ್ಮೆ, ಇತಿಹಾಸ ಉಜ್ವಲತೆ ಮತ್ತು ಪುಣ್ಯಕ್ಷೇತ್ರಗಳನ್ನು ಅವುಗಳ ವೈಶಿಷ್ಟ್ಯಗಳೊಂದಿಗೆ ಪರಿಚಯ ಮಾಡಿಕೊಡುವುದಾಗಿದೆ. ಇವರು ಕೆಲವು ಮಕ್ಕಳ ಗೀತೆಗಳನ್ನೂ ರಚಿಸಿದ್ದಾರೆ. ಇವರು ಬರೆದ ಸಂಶೋಧನ ಗ್ರಂಥ 'ಕನ್ನಡ ಛಂದೋವಿಕಾಸ' ಒಂದು ಮೌಲಿಕ ಆಧಾರ ಗ್ರಂಥ. 'ನಕ್ಷತ್ರಗಾನ' ತನನತೊಂ 'ಬಣ್ಣದ ಚೆಂಡು' ಮುಂತಾದವು ಇವರ ಇತರ ಕೃತಿಗಳು.

''ಶಿವಯೋಗ ಮಂದಿರ'' ಮಲಪ್ರಭಾ ನದಿಯ ದಂಡೆಯ ಮೇಲೆ ಆಧ್ಯಾತ್ಮವಿದ್ಯೆಗೆಂದು ನಿರ್ಮಿತವಾದ ಒಂದು ಪೀಠ. ಇದು ಗುರುಕುಲ ಸಂಪ್ರದಾಯದ ಬಗೆಯಲ್ಲಿದೆ. ಇದರ ಸುತ್ತಲಿನ ನಿಸರ್ಗಶೋಭೆ, ಶಾಂತಿಯ ನೆಲಸು, ತಪೋಭೂಮಿಯ ಬದುಕು-ಬೆಳಕನ್ನು ಹೊಮ್ಮಿಸಿದೆ. ಈ ವಿಷಯವು ಪ್ರಸ್ತುತ ಕವಿತೆಯಲ್ಲಿ ಸಾಕಾರಗೊಂಡಿದೆ. ಇದನ್ನು ''ಭಾವ ತೀರ್ಥ'' ಸಂಗ್ರಹದಿಂದ ಆಯ್ದು ಸಂಪಾದಿಸಲಾಗಿದೆ).

ಇದೊ ಮಂದಿರ ಶಿವ ಮಂದಿರ
　　ಶಿವಯೋಗದ ಮಂದಿರ
ಪ್ರಕೃತಿಯ ಪರಮಾನಂದದ
　　ಸುಧೆ ಸೂಸುವ ಚಂದಿರ. –1–

ಸುತ್ತಲು ಸುಳಿದೆದ್ದಿವೆ ಕಿರಿ
　　ಕಾನನಗಳು ದಿಟ್ಟಿಗೆ
ಮೌನದೊಂದು ಸಂಗದಿ ಕಳೆ
　　ಬಂದಿದೆ ಶಿವಸೃಷ್ಟಿಗೆ
ಕಾನನದೀ ಮೌನದಲ್ಲಿ
　　ಶ್ರುತಿಗೂಡುವ ತಾನದಲ್ಲಿ
ತನ್ನದೆ ಸುಖ-ಗಾನದಲ್ಲಿ
　　ತೇಲಿಸಿ ತಿಳಿಯೊಲವನು
ರಚಿಸುವಳು ಮಲಾಪಹಾರಿ
　　ತೆರ ತೆರನಹ ಚೆಲುವನು –2–

ಜಲ ಮಡುಗಟ್ಟಿದ ಈ ದಡ-
　　ದಲ್ಲಿ ನೆಲಸಿದೆ ಸೌಂದರ
ಲತೆ ಲತೆ ಜತೆಗೂಡಿ ನೆಳಲ
　　ನೆಯ್ದಿಕ್ಕಿದೆ ಹಂದರ
ಕುಳ್ಳಿರು ಈ ತಂಪಿನಲ್ಲಿ
ಒಂದಾಗುತ ಸೊಂಪಿನಲ್ಲಿ
ತೇಲಲಿ ಎದೆ ತಂಪಿನಲ್ಲಿ
　　ನೈರ್ಮಲ್ಯದ ಸಂಗಕೆ
ಕರ್ಕಶ ಕಾಠಿಣ್ಯವೆಲ್ಲ
　　ಕರಗುವ ರಸರಂಗಕೆ –3–



### ಶಬ್ದಗಳ ಅರ್ಥ

ಕಾನನ - ಅಡವಿ, ಅರಣ್ಯ; ಸಂಗ - ಸಹವಾಸ, ಮಲಾಪಹಾರಿ - ಮಲಪ್ರಭಾ ನದಿಗೆ ಇರುವ ಇನ್ನೊಂದು ಹೆಸರು; ಸೊಂಪು - ಹಿಗ್ಗು, ಚೆಲುವು; ತಾನ - ಸ್ವರ ವಿಸ್ತಾರ ಆಲಾಪ.

### ವಿಶೇಷ ವಿಚಾರ -

1) ಶಿವಸೃಷ್ಟಿ - ಶಿವನ ಸೃಷ್ಟಿಯೆಂದೂ, ಆನಂದದ ನೆಲೆಯೆಂದೂ ಅರ್ಥ
2) ರಸರಂಗ - 'ರಸ' ಎಂಬುದಕ್ಕೆ ಸೌಂದರ್ಯ ಮತ್ತು ಆನಂದ ಎಂದು ಎರಡು ಅರ್ಥ. 'ರಸರಂಗ' ಎಂದರೆ ಈ ಭಾವಗಳು ರಂಜಿಸುವ ನೆಲೆ

## ಅಭ್ಯಾಸ

### ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1) ಶಿವಯೋಗ ಮಂದಿರ ಯಾವ ಚಂದಿರವಾಗಿದ್ದಾನೆ?
2) ಶಿವಯೋಗ ಮಂದಿರದ ಸುತ್ತಲು ಏನು ಸುಳಿದೆದ್ದಿವೆ?
3) ಯಾವುದು ಹಂದರ ನೆಯ್ದಿಕ್ಕಿದೆ?

### ಕೃತಿ 2) ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

1) ತೇಲಿಸು x
2) ಕರ್ಕಶ x
3) ಕಠಿಣ x
4) ಸುಂದರ x

### ಕೃತಿ 3) ಒಂದು ದಿನ ರಜೆ ನೀಡುವಂತೆ ನಿಮ್ಮ ವರ್ಗ ಶಿಕ್ಷಕರಿಗೆ ಅರ್ಜಿ ಬರೆಯಿರಿ.

### ಕೃತಿ 4) ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿರಿ.

ತಾನದಲ್ಲಿ, ದಿಟ್ಟಿಗೆ, ಸಂಗಕ್ಕೆ, ಸುಧೆಯ

### ಕೃತಿ 5) ಕೆಳಗಿನ ಶಬ್ದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ.

ಕಾನನ, ಸಂಗ, ರಚಿಸು, ನಿರ್ಮಲ

***

92RC9I